ಎಲ್ಲವೂ ಸ್ವಯಂಪ್ರೇರಿತವಾಗಿ ಸಂಭವಿಸುತ್ತದೆ. 'ಅತಿಕ್ರಮಣದಿಂದ ಅತೀಂದ್ರಿಯದವರೆಗೆ' ಎಂಬುದೇ ಮಂತ್ರ.

**◆ ನಿಮ್ಮ ಆತ್ಮಚರಿತ್ರೆ 'ಪದ್ಮ ಪತ್ರರೆ ಜೀಬನ'ದ ಬರವಣಿಗೆ ನಿಮಗೆ ತೃಪ್ತಿ ನೀಡಿದೆಯಾ? ನಿಮ್ಮ ಆತ್ಮ ಸಂವಾದ ಮತ್ತು ಆಂತರಿಕ ಸಂಘರ್ಷಗಳನ್ನು ಪ್ರಾಮಾಣಿಕವಾಗಿ ಅಭಿವ್ಯಕ್ತಿಸಲು ಸಾಧ್ಯವಾಯಿತೇ? ಅಥವಾ ಯಾವುದಾದರೂ ಸ್ವಯಂ ಸೆನ್ಸಾರ್‌ಶಿಪ್ ಅಥವಾ ಮೌನದ ಮೊರೆ ಹೋಗಿದ್ದೀರೋ?**

ಪ್ರತಿಯೊಂದು ಆತ್ಮಚರಿತ್ರೆಯೂ ಅಪೂರ್ಣ. ನನ್ನದೂ ಹಾಗೆಯೇ. ಖಂಡಿತಾ ಅದರಲ್ಲಿ ಮೌನದ ತುಣುಕುಗಳಿವೆ. ಏಕೆಂದರೆ ಪ್ರತಿಯೊಬ್ಬ ಮನುಷ್ಯನ ಒಳಗೆ ಒಂದು ಖಾಸಗಿ ಜಾಗ ಇರುತ್ತದೆ.

**◆ ನಿಮ್ಮ ಕಾದಂಬರಿ 'ಯಾಜ್ಞಸೇನಿ'ಯಲ್ಲಿ ದ್ರೌಪದಿ, 'ಜೀವನದ ಬಗ್ಗೆ ಎಲ್ಲವನ್ನೂ ಹೇಳಿದ ನಂತರವೂ, ಕೊನೆಯ ಮಾತೊಂದು ಉಳಿದುಬಿಡುತ್ತದೆ' ಎಂದು ಹೇಳುತ್ತಾಳೆ. ಅಂದರೆ, ನಿಮ್ಮ ಆತ್ಮಚರಿತ್ರೆ ಬರೆದ ನಂತರವೂ ನಿಮ್ಮಲ್ಲಿ ಇನ್ನೂ ಅಂತಹ ಹೇಳದಿರುವ ವಿಷಯ ಗಳಿವೆಯೆ?**

ಹೌದು. ಎಲ್ಲವನ್ನೂ ಬರೆಯ ಬೇಕಾಗಿಲ್ಲ.



**◆ ನೀವು ಉದಾರವಾದಿ ಮತ್ತು ಪ್ರಗತಿಪರ ಕುಟುಂಬದಲ್ಲಿ ಹುಟ್ಟಿ ಬೆಳೆದವರು. ಆದರೆ, ಸಂಪ್ರದಾಯ ವಾದಿ ಕುಟುಂಬದಲ್ಲಿ ವಿವಾಹವಾದಿರಿ. ಅಂಥಲ್ಲಿ ನೀವು 'ನೀವೇ' ಆಗಿ ಇರಲು ಹೇಗೆ ಸಾಧ್ಯವಾಯಿತು?**

ಮದುವೆಯ ನಂತರದ ಮೊದಲ ಐದಾರು ವರ್ಷ ಬರಹಗಾರ್ತಿಯಾಗಿ ನನ್ನ ಜೀವನದಲ್ಲಿ ಅತ್ಯಂತ ಖಿನ್ನತೆಯ ಸಮಯವಾಗಿತ್ತು. ಏಕೆಂದರೆ ನಾನು ಬರೆಯುತ್ತಿರಲಿಲ್ಲ. ನಿಧಾನವಾಗಿ ಮತ್ತು ಸ್ಥಿರವಾಗಿ ನಾನು ಇಂದಿನ ಸ್ಥಿತಿ ತಲುಪಿದೆ. ಕೌಟುಂಬಿಕ ವಿಷಯಗಳಲ್ಲಿ ನನ್ನ ಅನೇಕ ನಿರ್ಧಾರಗಳನ್ನು ಗೌರವಿಸಲಾಯಿತು. ಮೂರು ಮಕ್ಕಳನ್ನು ಬೆಳೆಸುವುದು, ಅವರ ಆರೋಗ್ಯ ಮತ್ತು ಶಿಕ್ಷಣವನ್ನು ನೋಡಿಕೊಳ್ಳುವುದು ಅಲ್ಲದೆ, ಅವರ ಸಾಮರ್ಥ್ಯ ಮತ್ತು ಮಹತ್ವಾಕಾಂಕ್ಷೆಗಳಿಗೆ ಅನುಗುಣವಾಗಿ ಅವರ ವೃತ್ತಿಜೀವನವನ್ನು ಮುನ್ನಡೆಸುವುದು ನನ್ನ ಜವಾಬ್ದಾರಿಯಾಗಿತ್ತು. ಎಲ್ಲ ಮಹಿಳೆಯರು ಬಹುಕಾರ್ಯಕ್ಷಮತೆ ಹೊಂದಿರುತ್ತಾರೆ ಮತ್ತು ಕುಟುಂಬಿಕ ವಿಷಯಗಳಲ್ಲಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವುಳ್ಳವರು ಎಂದು ನಾನು ಭಾವಿಸುತ್ತೇನೆ. ಸ್ವತಂತ್ರ ಅಭಿಪ್ರಾಯ ಹೊಂದಲು ಬೇಕಿರುವ ಶಕ್ತಿ ಮತ್ತು ಧೈರ್ಯಗಳು ಕುಟುಂಬವನ್ನು ಒಡೆಯಬೇಕಿಲ್ಲ.

**◆ ನಿಮ್ಮ ಪತಿಯೊಂದಿಗೆ ಭಾವನಾತ್ಮಕ, ಸೈದ್ಧಾಂತಿಕ ಅಥವಾ ರಾಜಕೀಯ ಭಿನ್ನಾಭಿಪ್ರಾಯಗಳನ್ನು ನೀವು ಹೇಗೆ ಎದುರಿಸುತ್ತಿದ್ದಿರಿ?**

ನಾನು ಎಲ್ಲ ಸಂಗತಿಗಳಲ್ಲಿ ದೃಢವಾಗಿದ್ದೆ, ಪ್ರಾಮಾಣಿಕಳಾಗಿದ್ದೆ.

**◆ ಒಬ್ಬ ವ್ಯಕ್ತಿಯಾಗಿ ಮತ್ತು ಬರಹಗಾರ್ತಿಯಾಗಿ ಎರಡೂ ಪಾತ್ರಗಳ ಸಂಬಂಧವನ್ನು ನೀವು ಹೇಗೆ ಪರಿಗಣಿಸುತ್ತೀರಿ? ನಿಮ್ಮ ಅನುಭವದಿಂದ ಹೇಳುವಿರಾ?**

ಬರಹಗಾರನ ಸಿದ್ಧಾಂತವು ಹೆಚ್ಚಾಗಿ ಪಾತ್ರಗಳಲ್ಲಿ ಪ್ರತಿಫಲಿಸುತ್ತದೆ. ನಾನು ನಂಬುವುದನ್ನು ಬರೆಯುತ್ತೇನೆ. ನಾನು ಬರೆಯುವುದನ್ನು ನನ್ನ ಜೀವನದಲ್ಲಿ ಆಚರಣೆಗೆ ತರುತ್ತೇನೆ. ಉದಾಹರಣೆಗೆ, ಜಾತಿಯಿಲ್ಲದ, ವರ್ಗವಿಲ್ಲದ ಸಮಾಜದ ಆಶಯ– ಜಾತಿ, ಮತ ಮತ್ತು ಲಿಂಗವನ್ನು ಲೆಕ್ಕಿಸದೆ ಎಲ್ಲ ಮಾನವರು ಸಮಾನ ಹಕ್ಕುಗಳನ್ನು ಹೊಂದುವುದು.